**ಅಸಲು ದಾವಾ ಸಂಖ್ಯೆ: 400/2018**

**ಡಿಡಬ್ಲೂ -1**

**ದಿಃ 15-02-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**
**ಮುಂದುವರೆದ ಮುಖ್ಯ ವಿಚಾರಣೆ ಪ್ರತಿವಾದಿಯ ಪರ ವಕೀಲರಾದ ಶ್ರೀ. PMP ರವರಿಂದಃ-**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದೇನೆ. ಅದರಲ್ಲಿ ಬರೆದ ಸಂಗತಿಗಳು ನಿಜವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಇರುತ್ತದೆ.

ನಾನು ಈ ಕೆಳಗಿನ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಅವುಗಳನ್ನು ಈ ಕೆಳಗಿನಂತೆ ಗುರುತಿಸಲಾಯಿತು.

ನಾನು ಈಗ ನಿಡಿ-11 ಕರಾರು ಪತ್ರವನ್ನು ನೋಡುತ್ತಿದ್ದು ಅದರಲ್ಲಿ ಪಾಚಾಸಾಬ ಇನಾಮದಾರ ಹಾಗೂ ಬಾಬುಸಾಹೇಬ ಇನಾಮದಾರ ರವರು ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ. ಸಾಕ್ಷಿ ಸದರಿ ಸಹಿಗಳನ್ನು ನೋಡಿ ಗುರುತಿಸಿದ ಕಾರಣ ಸದರಿ ಸಹಿಗಳನ್ನು ನಿಡಿ-11(ಸಿ) ಹಾಗೂ ನಿಡಿ-11(ಡಿ) ಎಂದು ಗುರುತಿಸಲಾಯಿತು.

ನಿಡಿ-11 ಕ್ಕೆ ಬಾಬಾಜಾನ ಹಾಗೂ ಪಾಚಾಸಾಬ, ಬಾಪುಸಾಹೇಬ ರವರು 66,000/- ರೂ.ಗಳನ್ನು ಪಡೆದು ಸದರಿ ಹಿಂಬರಹದ ಕೆಳಗೆ ನನ್ನ ಸಮಕ್ಷಮ ಸಹಿ ಮಾಡಿರುತ್ತಾರೆ. ಸಾಕ್ಷಿ ಸದರಿ ಸಹಿಗಳನ್ನು ನೋಡಿ ಗುರುತಿಸಿದ ಕಾರಣ ಸದರಿ ಸಹಿಗಳನ್ನು ಕ್ರಮವಾಗಿ ನಿಡಿ-11(ಇ), ನಿಡಿ-11(ಎಫ್ ) ಹಾಗೂ ನಿಡಿ-11(ಜಿ) ಎಂದು ಗುರುತಿಸಲಾಯಿತು.

ನಿಪಿ-5 ರ ದಾಖಲೆ ಆಗುವಾಗ ನಾನು ನೊಂದಾಣಾಧಿಕಾರಿ ಕಚೇರಿಯಲ್ಲಿ ಹಾಜರಿದ್ದೆ.

ನಾನು ಈಗ ನಿಡಿ-12 ಹಿಂಬರಹವನ್ನು ನೋಡುತ್ತಿದ್ದು ಸದರಿ ಹಿಂಬರಹದ ಕೆಳಗೆ ಬಾಬಾಸಾಬ, ಪಾಚಾಸಾಬ ಹಾಗೂ ಬಾಪುಸಾಹೇಬ ರವರು ನನ್ನ ಸಮಕ್ಷಮ ಹೆಬ್ಬಿಟ್ಟಿನ ಗುರುತನ್ನು ಹಾಕಿ ಸಹಿ ಮಾಡಿರುತ್ತಾರೆ. ಸಾಕ್ಷಿ ಸದರಿ ಸಹಿಗಳನ್ನು ನೋಡಿ ಗುರುತಿಸಿದ ಕಾರಣ ಸದರಿ ಸಹಿಗಳನ್ನು ಕ್ರಮವಾಗಿ ನಿಡಿ-12(ಎ), ನಿಡಿ-12(ಬಿ) ಹಾಗೂ ನಿಡಿ-12(ಸಿ) ಎಂದು ಗುರುತಿಸಲಾಯಿತು.

**ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಕಾಲವಕಾಶವನ್ನು ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**Sd/-**

**ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**

**ಬೆಳಗಾವಿ.**